# ಕರುಣೆಯ ಕಣ್ಣು

ಶಿಶಿರದ ಕೊನೆಯ ದಿನಗಳು ಅವು. ಪಾರಿಜಾತದ ಹೂಗಳು ಹಿಮದ ಚೂರುಗಳಂತೆ ಮರಕ್ಕಂಟಿ ಕುಳಿತಿವೆ. ಹಗಲಿನಲ್ಲೂ ನಕ್ಷತ್ರದಂತೆ ಹೊಳೆಯುವ ದೇವಕಣಗಿಲೆಯ ಬಿಳಿಯ ಹೂಗಳು ಬೋಳಾದ ಮರಗಳಲ್ಲಿ ಬೆಳ್ಳಕ್ಕಿಯ ಗರಿಯಂತೆ ಅರಳಿ ಯಾರಿಗೊ ಕಾಯುತ್ತಿವೆ. ವಸಂತ ಮಾಸ ಬರುತ್ತಿರುವುದರ ಮುನ್ಸೂಚನೆಯಾಗಿ ಮರಗಳ ಪರಿವಾರವೆಲ್ಲ ತಮ್ಮ ಹಳೆಯ ಉಡುಪುಗಳನ್ನು ಕಳಚಿಕೊಂಡು, ತಿಳಿಹಸುರಿನ ಚಿಗುರಿನ ಉಡುಪನ್ನು ಧರಿಸಲು ಸಜ್ಜಾಗಿವೆ. ವಸಂತಕ್ಕಿಂತ ಮುಂಚೆ ಕಾಲೂರುವ ಮುತ್ತುಗದ ಹೂಗಳು ಆಗಲೇ ನಿಗಿ ನಿಗಿ ಉರಿಯುವ ಕೆಂಡದಂತೆ ಮರಗಳ ಮೇಲೆ ಓಕುಳಿಯ ಬಣ್ಣ ಚೆಲ್ಲಿವೆ. ಬೆಟ್ಟಗುಡ್ಡಗಳೊಂದಿಗೆ ಗಂಧೋತ್ಸವವನ್ನಾಚರಿಸುವ ಜಾಲಾರ ಹೂವು ಇನ್ನು ಕೆಲವೇ ವಾರಗಳಲ್ಲಿ ನಮ್ಮ ಮನೆಬಾಗಿಲಿಗೆ ಅಡಿಯಿಡುತ್ತದೆ.

ಕೃತ್ರಿಮ ಅರಿಯದ, ಹೊಳಪಿನ ಆಕಾಶದ ಅಡಿಯಲ್ಲಿ ಸ್ವರ್ಗದ ಒಂದು ತುಣುಕಿನಂತೆ ದೃಗ್ಗೋಚರವಾಗುವ ಕವಿಶೈಲದ ಸಾನ್ನಿಧ್ಯದಲ್ಲಿ ಕುವೆಂಪು ಸೃಷ್ಟಿಸಿದ 'ಸಬಕ್ತಗೀನ್' (ನವಿಲು ಕವನ ಸಂಕಲನ) ಎಂಬ ಪುಟ್ಟ ಕವಿತೆ ಕರುಣೆಯ ಕೋಡಿನಂತೆ ನಮ್ಮನ್ನು ಸೆಳೆಯುತ್ತದೆ. ದ್ವೇಷ, ತಿರಸ್ಕಾರ, ಅಸಹನೆಯ ಬೆಂಕಿಯ ಜ್ವಾಲೆಯಿಂದ ಸುಡಿಸಿಕೊಳ್ಳದ ಈ ಕವಿತೆ ಬುದ್ಧದೇವನ ಮಹಾಕರುಣೆ ಮತ್ತು ಮೈತ್ರಿಯ ಸಂದೇಶವನ್ನು ನಮ್ಮೊಳಗೆ ಬಿತ್ತುತ್ತದೆ. ಮನುಕುಲವನ್ನು ತೀವ್ರವಾಗಿ ಕಾಡುತ್ತಿರುವ ಯುದ್ಧ, ಹಿಂಸೆ, ಪರಮತ ನಿಂದನೆ, ನಂಜು ಸುರಿಸುವ ಮಾತುಗಳು, ಕೆಡುವುವ ವಿದ್ಯಮಾನಗಳು ಪ್ರವೇಶ ಪಡೆಯದ ಹಿಮಪ್ರದೇಶದ ನಿರ್ಜನ ಭೂಮಿಯಂತಿರುವ ಕವಿಶೈಲದಲ್ಲಿ ಇಂತಹ ಕವಿತೆಯಲ್ಲದೆ ಮತ್ತೇನು ಹುಟ್ಟೀತು!

ಈ ಕವಿತೆಯಲ್ಲಿ ಬರುವ ಸಬಕ್ತಗೀನ್ ಒಬ್ಬ ಅನಾಮಿಕ ಯೋಧ. ಒಮ್ಮೆ ಅವನು ಬೇಟೆಯನಾಡಲು ದಟ್ಟ ಅರಣ್ಯಕ್ಕೆ ಬಂದ. ಕಾಡನ್ನು ಎಷ್ಟು ಸುತ್ತಿದರೂ ಒಂದೂ ಬೇಟೆ ಸಿಗದೆ ದಣಿದ. ಸುಡುಬಿಸಿಲಿನ ಆಯಾಸದಿಂದ ಸಬಕ್ತಗೀನ್ ಬಸವಳಿದ. ಕಾಡಿನ ನಡುವೆ ತಿಳಿನೀರ ಕೊಳ ಕಂಡಿತು. ಧಗೆಗೆ ಬಾಯಾರಿದ್ದ ಸಬಕ್ತಗೀನ್ ನೀರುಕುಡಿದು ದಣಿವಾರಿಸಿಕೊಂಡ. ವಿರಮಿಸಿಕೊಳ್ಳಲು ಅಲ್ಲೇ ಒಂದು ಮರದಡಿ ಮಲಗಿದ. ಇದ್ದಕ್ಕಿದ್ದಂತೆ ಯಾವುದೋ ಪ್ರಾಣಿ ನೀರು ಕುಡಿಯುತ್ತಿರುವ ಸದ್ದಾಯಿತು. ಸಬಕ್ತಗೀನ್ ಎಚ್ಚರಗೊಂಡು ನೋಡಿದ, ಹೆಣ್ಣು ಜಿಂಕೆಯೊಂದು ತನ್ನ ಮರಿಯೊಡನೆ ಅದೇ ಕೊಳದಲ್ಲಿ ನೀರು ಕುಡಿಯುತ್ತಿತ್ತು. ಬಿಲ್ಲು ಬಾಣವನ್ನು ಹಿಡಿದಿದ್ದ ಸಬಕ್ತಗೀನ್‌ನನ್ನು ಕಂಡು ತಾಯಿ ಜಿಂಕೆ ತನ್ನ ಮರಿಯನ್ನು ಅಲ್ಲೇ ಬಿಟ್ಟು ಪ್ರಾಣ ಭಯದಿಂದ ಓಡಿ ಹೋಯಿತು. ಅನಾಯಾಸವಾಗಿ ಸಿಕ್ಕಿದ ಮರಿಜಿಂಕೆಯನ್ನು ಎರಡೂ ಕೈಗಳಿಂದ ಎದೆಗವುಚಿಕೊಂಡು ಸಬಕ್ತಗೀನ್ ಹರುಷದಿಂದ ಹೊರಟ. ಆದರೆ ಓಡಿಹೋದ ತಾಯಿ ಜಿಂಕೆಗೆ ತನ್ನ ಮರಿಯನ್ನು ಬಿಟ್ಟುಹೋಗಲು ಮನಸ್ಸಾಗಲಿಲ್ಲ. ತನ್ನ ಜೀವದಾಸೆಯನ್ನು ತೊರೆದು ತನ್ನ ಕರುಳ ಕುಡಿಗಾಗಿ ಹಂಬಲಿಸುತ್ತಾ, ಬೇಟೆಗಾರನಿಗೆ ಬೆದರದೆ ಮರಿಗಾಗಿ ಸಬಕ್ತಗೀನ್‌ನನ್ನು ಹಿಂಬಾಲಿಸಿತು. ತಾಯಿ ಜಿಂಕೆ ಯೋಧನನ್ನು 'ಅಯ್ಯಾ ಸಬಕ್ತಗೀನ್, ಕಂದನಳಿಯಲ್ ಅಳಿವೆ ನಾನ್! ಎನ್ನ ಕರುಳನೊಯ್ವೆಯ ನೀನ್! ಮಗುವನ್ ಕೊಡಯ್ ಬರ್ದುಕುವೆ ನಾನ್!' ಎಂದು ಪರಿಪರಿಯಾಗಿ ಬೇಡಿಕೊಂಡಿತು. ತಾಯಿ ಜಿಂಕೆಯ ಧ್ವನಿಯನ್ನು ಕೇಳಿ ಸಬಕ್ತಗೀನ್ ಹಿಂದಿರುಗಿ ನೋಡಿದ. ತಾಯಿ ಜಿಂಕೆಯ ಕಣ್ಣುಗಳಲ್ಲಿದ್ದ ಆರ್ದ್ರತೆಯನ್ನು ನೋಡಿ ಯೋಧನ ಕಲ್ಲೆದೆ ಮೃದುವಾಯಿತು. ತನ್ನ ಕರುಳ ಕುಡಿಗಾಗಿ ಹಿಂಬಾಲಿಸಿ ಬರುತ್ತಿದ್ದ ತಾಯಿ ಜಿಂಕೆಯ ಕಣ್ನೋಟ ಅವನ ಕಠಿಣ ಹೃದಯವನ್ನು ಕರಗಿಸಿತು. ತಾಯಿ ಜಿಂಕೆಯ ಕರುಣೆಯಲ್ಲಿ ಕರಗಿದ ಯೋಧನನ್ನು ಕುರಿತು ಕುವೆಂಪು 'ಕರುಣೆಯದುವೆ ದೇವರಲ್ತೆ? ಕಣ್ಣಪನಿಯೆ ತೀರ್ಥಮಲ್ತೆ?' ಎಂದು ಅವನಲ್ಲಾದ ಹೃದಯ ಪರಿವರ್ತನೆಯನ್ನು ಕರುಣೆಯ ಭಾಷೆಯಲ್ಲಿ ವಿವರಿಸುತ್ತಾರೆ. ತಾಯಿ ಜಿಂಕೆಯ ದುಃಖವನ್ನು ಅರಿತ ಸಬಕ್ತಗೀನ್ ತನ್ನ ತೋಳಿನಲ್ಲಿದ್ದ ಮರಿಜಿಂಕೆಯ ಹಣೆಗೆ ಮುತ್ತನಿಟ್ಟು 'ಬಾರ ತಾಯೆ, ನಿನ್ನ ಬೇಡಿದಿದೋ ಮರಿಯ ಕೊಟ್ಟಪೆನ್! ಇಗೋ ಮಗುವ ಬಿಟ್ಟಪೆನ್' ಎಂದು ತನ್ನೊಳಗಿದ್ದ ಸ್ವಾರ್ಥದ ಅಲ್ಪತನವನ್ನು ಕಳೆದುಕೊಂಡು ಮರಿಜಿಂಕೆಯನ್ನು ಅದರ ತಾಯಿಯೆಡೆಗೆ ಹೋಗಲು ಬಿಟ್ಟ.

ತಾಯಿ ಜಿಂಕೆ ಓಡೋಡಿ ಬಂದು ತನ್ನ ಮರಿಯನ್ನು ಕೂಡಿಕೊಂಡು ಅದರ ಹಣೆಗೆ ಪ್ರೇಮದಿಂದ ಮುತ್ತನಿಟ್ಟಿತು. ತನ್ನ ಮರಿಯನ್ನು ಮರಳಿಸಿದ ಯೋಧನಿಗೆ ತನ್ನ ಕಣ್ಣುಗಳಿಂದಲೇ ಕೃತಜ್ಞತೆಯನ್ನು ಸಲ್ಲಿಸಿ, ಮತ್ತೆ ಮತ್ತೆ ಅವನನ್ನು ನೋಡುತ್ತಾ ತನ್ನ ಮರಿಯೊಂದಿಗೆ ಅಲ್ಲಿಂದ ಹೊರಟಿತು. ಹೀಗೆ ಹೋಗುವಾಗ ಸಬಕ್ತಗೀನ್‌ನಿಗೆ 'ಮುಂದೆ ನೀನು ಈ ಧರೆಯನ್ನು ಆಳುವೆ' ಎಂದು ಹರಸಿಹೋಯಿತು. ಅದರ ಹರಕೆಯಂತೆ ಸಬಕ್ತಗೀನ್ ಮುಂದೆ ಅರಸನಾಗಿ ರಾಜ್ಯವನ್ನಾಳಿದ. 'ವರವನೀವ ಶಕ್ತಿ ದೇವರಿಗೊಬ್ಬನಿಗೇ ಇರುವುದಿಲ್ಲ. ತಾಯಿಪ್ರೀತಿಯಿಂದ ಕೂಡಿರುವ ವರವೂ ಕೂಡ ದೇವರ ವರದಂತೆ ಚಿರಾಯು!' ಎಂದು ಕುವೆಂಪು ಕರುಣೆಯ ಬೀಜಗಳನ್ನು ಎಲ್ಲರೆದೆಯಲ್ಲಿ ಬಿತ್ತಿ ಈ ಕವಿತೆಯನ್ನು ಮುಗಿಸುತ್ತಾರೆ. ಇಂದ್ರಿಯ ಸಂವೇದನೆಗಳ ಮೂಲಕವೇ ತೆರೆದುಕೊಳ್ಳುವ ಈ ಪುಟ್ಟ ಕವಿತೆ ನಮಗೆ ಲೋಕವನ್ನು ಸದಾಕಾಲವೂ ಸಲಹುವ ಮಹಾಕರುಣೆಯ ದರ್ಶನವನ್ನು ನೀಡುವಲ್ಲಿ ಸಫಲವಾಗುತ್ತದೆ. ಸಕಲ ಜೀವಿಗಳಿಗೂ ಒಳಿತನ್ನೇ ಬಯಸುವ ವಚನಕಾರರು ಮತ್ತು ತತ್ವಪದಕಾರರ ಹೊಕ್ಕುಳುಬಳ್ಳಿಯಿಂದ ಬೇರ್ಪಡೆಗೊಳ್ಳದೆ ಬಂದಿರುವ ಈ ಕವಿತೆ ಕನ್ನಡ ಪರಂಪರೆಯ ಉನ್ನತ ಮೌಲ್ಯಗಳಿಂದ ಪೋಷಣೆಯನ್ನು ಪಡೆದಿದೆ.

ಟೊಳ್ಳು ಉಪದೇಶಗಳಿಂದ, ವಾಗ್‌ವಿಲಾಸದಿಂದ ದೂರ ಉಳಿದಿರುವ ಈ ಕವಿತೆ ಅತಿ ಭಾವುಕತೆಯ ಭಾರವಿಲ್ಲದೆ, ತನ್ನೊಳಗೆ ಮಡುಗಟ್ಟಿರುವ ಲೋಕ ಕಾರುಣ್ಯದಿಂದ ನಮ್ಮ ಎದೆಗೆ ಇಳಿಯುತ್ತದೆ. ಇಂತಹ ಕವಿತೆಗಳನ್ನೇ ಕುರಿತು ಬೇಂದ್ರೆ ಹೇಳಿದ ಮಾತು ಹೀಗಿದೆ: 'ಹದ ಇಲ್ಲದ ಪದಾ ಬರೋದಿಲ್ಲ/ ಕದ ತಗ್ಯೂದಿಲ್ಲ ಅಂತಃಕರಣ'. ಕರುಣೆ ಮತ್ತು ಸೋದರತ್ವದ ಅಭಾವದಲ್ಲಿ ಯಾರು ಜೀವನ್ಮರಣದ ಸ್ಥಿತಿಯಲ್ಲಿ ಪ್ರತಿ ಗಳಿಗೆಯನ್ನೂ ಕಳೆಯುತ್ತಿದ್ದಾರೋ ಅಂತಹವರ ಬರಿದಾದ ಕಣ್ಣುಗಳಲ್ಲಿ ಮಾನವತೆಯ ನಿರೂಪಕನಂತಿರುವ ಈ ಕವಿತೆ ಆಸೆಯ ದೀಪ ಬೆಳಗಿಸಿ, ಭರವಸೆಯ ಹಾಯಿದೋಣಿಯಂತೆ ತೇಲುತ್ತದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಯಾರು ಸತ್ಯವನ್ನು ಆಶ್ರಯಿಸುತ್ತಾರೋ ಅವರ ದಾರಿ ಮುಳ್ಳುಗಳಿಲ್ಲದೆ ಸುಗಮವಾಗಿರುತ್ತದೆ.
  —ಋಗ್ವೇದ
- ನಾನು ಮುಂಡಾಸಿನಲ್ಲಿ ಸುತ್ತಿಕೊಂಡಿರೋದು ಮತ್ತೇನನ್ನೂ ಅಲ್ಲ. ನನ್ನ ದೇವರನ್ನು.
  —ಮನ್ಸೂರ್ ಅಲ್ ಹಲ್ಲಾಜ್
- ಒಬ್ಬರು, ಇನ್ನೊಬ್ಬರನ್ನು ಅವರಿಗಿಂತ ಹೆಚ್ಚು ಪ್ರೀತಿಸುವುದರಲ್ಲಿ ಮತ್ತು ಈ ಕುರಿತಾಗಿ ಆ ಇನ್ನೊಬ್ಬರಲ್ಲಿ ಪರಿವೆಯೇ ಇಲ್ಲದಿರುವುದರಲ್ಲಿ ಇದೆ, ಒಂದು ಚೆಲುವು, ಒಂದು ತಾಕುವಿಕೆ, ಒಂದು ಕಾವ್ಯಾತ್ಮಕ ಸಂಗತಿ.
  —ಆಂಟನ್ ಚೆಕಾವ್
- ಪ್ರಪಂಚದಲ್ಲಿ ಅತ್ಯುತ್ತಮ ಕಲೆ ಮತ್ತು ಕಲಿಯಲು ಅತಿ ಕಠಿಣವಾದ ಕಲೆ ಎಂದರೆ ಜೀವನ ಕಲೆ. ಜೀವನ ಒಂದು ಕಲೆ, ಅದು ಎಲ್ಲ ಕಲೆಗಳಿಗಿಂತ ಹಿರಿದಾದುದು.
  —ಮಹಾತ್ಮ ಗಾಂಧಿ
- ಕಣ್ಣು ಬರಿ ಇಂದ್ರಿಯವಲ್ಲೊ; ಸಾಕ್ಷಾತ್ಕಾರದ ಅಪರೋಕ್ಷದ ಅನುಭೂತಿಯ ಒಂದಂಗ!
  —ಕುವೆಂಪು
- ಸಮಯವಿಲ್ಲ ಎಂಬ ಕಾರಣ, ಕಾರಣವೇ ಅಲ್ಲ. ಅದೊಂದು ನೆಪ. ಶ್ರದ್ಧೆ, ನಿಷ್ಠೆ ಮತ್ತು ದೃಢಸಂಕಲ್ಪ ಇದ್ದರೆ ಯಾವ ಕಾರಣವೂ ಅಡ್ಡಿಯಾಗದು. ಯಾವುದಕ್ಕೆ ಆದ್ಯತೆ ನೀಡಬೇಕು ಎಂಬುದನ್ನು ತಿಳಿದುಕೊಂಡರೆ ಕೆಲಸ ಸುಲಭವಾಗುತ್ತದೆ.
  —ಸುಭಾಷಿತ
- ಇದ್ದಷ್ಟು ದಿನವಾರೆ ಇರುವಷ್ಟು ಪ್ರೀತಿಯ ಇನ್ನಷ್ಟು ರುಚಿಮಾಡಿ ತೆರಳುವುದು.
  —ದ.ರಾ. ಬೇಂದ್ರೆ
- ಪರರನ್ನು ಹೀನವಾಗಿ ಪರಿಗಣಿಸಬೇಡಿ. ಅದು ನಿಮ್ಮ ಮನಸ್ಸಿನ ಯೋಗ್ಯತೆಯನ್ನು ಕುಗ್ಗಿಸುತ್ತದೆ.
  —ಇಂಗರ್ ಸಾಲ್